

■ ಬನವಾಸಿ ವೆಂಕಟೇಶ ದೀಕ್ಷಿತ್

ಕಲೆ: ಮೋನಪ್ಪ ಎಚ್.ಎಸ್

## ಯಜಮಾನಿಕೆ ಗತ್ತಿನಲ್ಲಿ ದೇಶ್ವಂತರು

ಅಜ್ಜ ಅಪ್ಪನ ಕಾಲದಲ್ಲೇ ಆಗಾಗ ವಾರಸುದಾರರು ಬೇರೆ ಬೇರೆ ಸಂದರ್ಭದಲ್ಲಿ ಹಣ ಇಸಿದುಕೊಳ್ಳುತ್ತ, ತಮ್ಮ ಪಾಲಿನ ಹಕ್ಕು ಬಿಟ್ಟುಕೊಡುತ್ತ ಬರುವುದು ನಡೆದಿತ್ತು. ಆಗೆಲ್ಲ ಸ್ವಲ್ಪ ಆಸ್ತಿ ಮಾರಿ ಅಥವಾ ಸಾಲ ಮಾಡಿ ಹಣ ಹೊಂದಿಸಲಾಗಿತ್ತು. ಕೆಲವರು ಮಾತ್ರ ವೃತ್ತಿಯಲ್ಲಿ ಧಂಡಿಯಾಗಿ ಒಟ್ಟುಮಾಡಿದವರು, ತಮಗೆ ಏನೂ ಬೇಡ ಅಂತ ಘೋಷಿಸಿದ್ದರು. ಕೊನೆಗೆ ಈಗ ಇಪ್ಪತ್ತು ವರ್ಷದಿಂದೀಚೆಗೆ ರಘುನಾಥ ದೇಶ್ವಂತ ಮತ್ತವರ ಮೂರು ಮಕ್ಕಳ ಪರಿಧಿಯಲ್ಲಿ ಆಸ್ತಿ ಹಕ್ಕು ಬಂದಿತ್ತು. ಹಿರಿಯವ ವಾಮನ ತನಗೇನೂ ಬೇಡ ಅಂದಿದ್ದಕ್ಕೆ ಈಗ ಇವರಿಬ್ಬರು, ಅಂದರೆ ಮಧ್ಯದವನು, ಕೊನೆಯವನು ಮತ್ತವರ ಮಕ್ಕಳು ಹಕ್ಕುದಾರರು. ಇಬ್ಬರಿಗೂ ಒಳ್ಳೆ ಸಂಬಳದ ಕೆಲಸವಿದೆ. ಆದರೆ ಮನೆ, ಹೆಣ್ಣು ಮಕ್ಕಳ ಮದುವೆ ಅಂತ ಯಾವಾಗಲೂ ಬೇಡಿಕೆ ಬರಬಹುದು.

ಪಾಂಡುರಂಗನ ಮಗ ಮಿಲಿಟರಿಯಲ್ಲಿ ಮೇಜರ್ ಹುದ್ದೆಯಲ್ಲಿದ್ದಾನೆ. ಶಾಂತಾರಾಮನ ಒಬ್ಬನೆ ಮಗ ಆನಂದ ಇಲ್ಲಿ ತಮ್ಮೊಡನಿದ್ದು ಎಲ್ಲ ನೋಡಿಕೊಳ್ಳುತ್ತಿದಾನೆ. ದೊಡ್ಡವಂಶ, ದೊಡ್ಡ ಹೆಸರು ಎಲ್ಲ ಸರಿ, ಆದರೆ ಕಾಲಾಂತರದಲ್ಲಿ ಎಲ್ಲಾ ವಂಶಗಳಿಗಾಗುವುದೇ ಆಗಿದೆ. ಹೊಸ ಕಾನೂನಿಂದಾಗಿ